**5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ, ಮಂಗಳೂರು, ದ.ಕ.**

ದಿ: 17.02.2025 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು– 3ನೇ ಪ್ರತಿವಾದಿ ಪರ ವಕೀಲರಿಂದ :**

ನಾನು ಮಂಗಳೂರು ಮಹಾನಗರ ಪಾಲಿಕೆಯವರಿಂದ ಲೈಸೆನ್ಸ್ ಪಡೆಯುವ ಮೊದಲು national high way authority ಯಿಂದ ನಿರಾಕ್ಷೇಪಣೆ ಪತ್ರವನ್ನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ಅದನ್ನು ಕಾರ್ಪೋರೇಷನ್ ರವರು ಕೇಳಿರುವುದಿಲ್ಲ ಎಂದು ನುಡಿದಿರುತ್ತಾರೆ. ಕಾರ್ಪೋರೇಷನ್ ನಿಂದ ಲೈಸೆನ್ಸ್ ಪಡೆಯಲು ನಾನು 3 ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ನ್ಯಾಯಾಲಯಕ್ಕೆ ನಾನು 1 ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ನಾನು ಬೆಸ್ಮೆಂಟ್ 1 ಮತ್ತು 2ರ ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ಆ ಕಟ್ಟಡದಲ್ಲಿ 2 ಬೆಸ್ಮೆಂಟ್, ಗ್ರೌಂಡ್‌ಫ್ಲೋರ್ ಮತ್ತು 4 ಮೇಲ್ಮಹಡಿ ಇರುತ್ತದೆ. ಇನ್ನು ಎರಡು ನಕಾಶೆಯ ಹಾಳೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಗ್ರೌಂಡ್‌ಫ್ಲೋರ್ ನ ಪ್ಲಾನ್ ನಕಾಶೆಯಲ್ಲಿ ಯಾವ ಬದಿಗೆ ರಸ್ತೆ ಇದೆ, ಸೈಟ್ ಪ್ಲಾನ್ ಮತ್ತು ಸೈಟ್‌ನ ಅಳತೆಯ ಬಗ್ಗೆ ನಮೂದು ಆಗಿರುತ್ತದೆಯೇ ಎಂದರೆ ಸರಿ. ನಾನು ಹಾಜರುಪಡಿಸಿದ ವಿಭಾಗ ಪತ್ರದ ನಿಪಿ–4 ಮತ್ತು 8ರ ನಕಾಶೆಯಗಳಲ್ಲಿ ತೋರಿಸಿದ ರೀತಿ National High way ಮತ್ತು ನಮ್ಮ

ಆಸ್ತಿಗಳ ನಡುವೆ 120/3C ಆಸ್ತಿ ಇದೆ ಎಂದರೆ ಸಾಕ್ಷಿ ಅದು NH ರಸ್ತೆಗೆ ಭೂ-ಸ್ವಾಧೀನವಾಗಿರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆ ನಂಃ120/3C ರ ಆಸ್ತಿಯು NHಗೆ ಭೂ-ಸ್ವಾಧೀನವಾಗಿದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ಸ್ಥಳಕ್ಕೆ ಹೋಗಲು right of access ನ್ನು ಪಡೆದುಕೊಂಡಿರುವುದಿಲ್ಲ ಆದರೆ ಮಾಮೂಲಿ ದಾರಿ ಇದೆ ಎಂದು ನುಡಿದಿರುತ್ತಾರೆ. ಲೈಸೆನ್ಸ್ ಜೊತೆ ಇರುವ ಉಳಿದ ಎರಡು ನಕಾಶೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ. ನಿಪಿ-4 ಮತ್ತು 8ರ ನಕಾಶೆಗಳನ್ನು 2021-22 ರಲ್ಲಿ ಸಿದ್ದಪಡಿಸಿದ್ದವುಗಳಾಗಿರುತ್ತವೆ. ನನ್ನ conversion ಆದೇಶದ ಜೊತೆ ಇರುವ ನಕಾಶೆಗಳನ್ನು ನಾನು ನೋಡಿರುತ್ತೇನೆ. conversion ಆದೇಶದ ಪ್ರಕಾರ ನನ್ನ ಆಸ್ತಿಯ 40 ಮೀಟರ್ ದೂರದಲ್ಲಿ NH ರಸ್ತೆ ಇದೆ ಎಂದು ನಮೂದಿಸಿದೆ ಎಂದರೆ ಅದು ತಪ್ಪು. ಸಾಕ್ಷಿ ಮುಂದುವರೆದು ನಿಪಿ-6 (ಎ)ನ್ನು ನೋಡಿ 22 ಮೀಟರ್ ದೂರದಲ್ಲಿ ಇದೆ ಎಂದು ನುಡಿದಿರುತ್ತಾರೆ. ನಾನು NH ರಸ್ತೆಯ ಬೇರೆ ಆಸ್ತಿಯನ್ನು ಅಭಿವೃದ್ದಿ ಪಡಿಸಿರುತ್ತೇನೆ. ಆ ರೀತಿ ಅಭಿವೃದ್ದಿ ಪಡಿಸುವ ಮೊದಲು NH authority ರವರಿಂದ ನಿರಾಪೇಕ್ಷಣಾ ಪತ್ರವನ್ನು ಪಡೆಯಬೇಕು ಎಂಬ ಅಂಶ ನನ್ನ ಗಮನದಲ್ಲಿ ಇಲ್ಲ. 2002 ರ ನಂತರ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಯಾವುದೇ development

ಮಾಡಬೇಕಾದರೆ NH authority ರವರು ನಿರಾಪೇಕ್ಷಣಾ ಪತ್ರವನ್ನು ಪಡೆಯಬೇಕು ಎಂಬ ಅಂಶ ನನ್ನ ಗಮನದಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು NH ನಡುವೆ ಬೇರೆಯವರಿಗೆ ಸೇರಿದ ಸರ್ವೇ ನಂಃ120/3C ಎಂಬ ಆಸ್ತಿ ಇದೆ ಎಂದರೆ ಸಾಕ್ಷಿ ಅದು ಸರ್ಕಾರಿ ಭೂಮಿ ಎಂದು ಉತ್ತರಿಸಿರುತ್ತಾರೆ. ನನ್ನ ಆಸ್ತಿ ಮತ್ತು NH ನಡುವೆ ಇರುವ ಸ್ಥಳದಲ್ಲಿ  ಬಸ್ ಸ್ಟ್ಯಾಂಡ್ ನಿರ್ಮಾಣ ಮಾಡಲು ಅನುಮತಿಯನ್ನು 3ನೇ ಪ್ರತಿವಾದಿ, ರಾಘವೇಂದ್ರ ಟಿ.ಎನ್, ಸುಭಾಸ್‌ಚಂದ್ರ ಶೆಟ್ಟಿ inner wheel club ನವರು ಅನುಮತಿ ಪಡೆಯಲು ಅರ್ಜಿ ದಾಖಲಿಸಿರುತ್ತಾರೆ. ಆ ಅರ್ಜಿಯ ಪ್ರತಿ ನನ್ನ ಬಳಿ ಇರುವುದಿಲ್ಲ. ರಸ್ತೆಯ ಬದಿಯ ನನ್ನ ಆಸ್ತಿಯ ಪೂರ್ವ ದಿಕ್ಕಿನಲ್ಲಿ 21.86 ಮೀಟರ್ ಅಗಲದ ಆಸ್ತಿ ಇರುತ್ತದೆ. ಈ ಆಸ್ತಿಯ ಪೈಕಿ ಸುಮಾರು ಮುಕ್ಕಾಲು ಭಾಗ ಆಸ್ತಿಯಲ್ಲಿ ಬಸ್ ಸ್ಟ್ಯಾಂಡ್ ನಿರ್ಮಾಣ ಮಾಡಲು ಅವರು 15 ಮೀಟರ್ ವಿಸ್ತೀರ್ಣದ ಆಸ್ತಿಯನ್ನು ಅನುಮತಿ ಕೋರಿದ್ದರು. ಈ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ, ಆದರೆ ಅಷ್ಟು ಸ್ಥಳವನ್ನು ಗುರುತಿಸಿದ್ದರು ಮತ್ತು ಭೂಮಿಯನ್ನು ಅಗೆದಿದ್ದರು ಎಂದು ನುಡಿದಿರುತ್ತಾರೆ. ಭೂಮಿ ಅಗೆದಿದ್ದನ್ನು ತೋರಿಸಲು ನನ್ನ ಬಳಿ ಪೋಟೋಗಳು ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ದಾವಾ

ಸ್ವತ್ತು ಐ ಆನಂದ್ ರವರ ಪೂರ್ವಿಕರಿಗೆ ಭೂ ನ್ಯಾಯ ಮಂಡಳಿಯಿಂದ ಬಂದ ಸ್ವತ್ತಾಗಿರುತ್ತದೆ.

ನಾನು 3ನೇ ಪ್ರತಿವಾದಿ ಹಾಜರುಪಡಿಸಿದ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು 3ನೇ ಪ್ರತಿವಾದಿಯ ವಿರುದ್ಧ ಪೋಲಿಸ್ ರಿಗೆ ದೂರು ನೀಡಿದ್ದು, ಪೋಲಿಸರು ಸಿವಿಲ್ ದಾವೆ ಆಗಿದ್ದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬೇಕು ಎಂದು ನನಗೆ ತಿಳಿಸಿರುತ್ತಾರೆ. 3ನೇ ಪ್ರತಿವಾದಿ 6 ಮೀಟರ್ ಉದ್ದ ಮತ್ತು 4 ಮೀಟರ್ ಅಗಲದ ವಿಸ್ತೀರ್ಣದ ಬಸ್ ನಿಲ್ದಾಣವನ್ನು ನಿರ್ಮಿಸಲು ಅನುಮತಿ ಕೋರಿದ್ದರು ಎಂಬ ವಿಚಾರ ನನ್ನ ಗಮನದಲ್ಲಿ ಇಲ್ಲ. ನನ್ನ ಆಸ್ತಿಯು national Highwayಯ ಯಾವ ಚೈನೇಜ್‌ನಿಂದ ಪ್ರಾರಂಭವಾಗಿ ಯಾವ ಚೈನೇಜ್‌ಗೆ ಕೊನೆಗೊಳ್ಳುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮೊದಲು ಇದ್ದ ಬಸ್ ನಿಲ್ದಾಣ ಈಗ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಸ್ ನಿಲ್ದಾಣದಿಂದ 50 ಮೀಟರ್ ದೂರದಲ್ಲಿ ಇದೆ. ಸಾಕ್ಷಿ ಮುಂದುವರೆದು ಆ ಬಸ್ ನಿಲ್ದಾಣ ಈಗಲೂ ಸಹ ಇದೆ ಎಂದು ನುಡಿದಿರುತ್ತಾರೆ. ಈಗ ಇರುವ ಬಸ್ ನಿಲ್ದಾಣ 4 ಮಾರ್ಗ ಸೇರುವ ಜಾಗದ ಎದುರುಗಡೆ ಬರುತ್ತದೆ ಎಂದರೆ ಸರಿಯಲ್ಲ. ಹೊಸ ಬಸ್ ನಿಲ್ದಾಣ ಮಾಡಲು

ಉದ್ದೇಶಿಸಿದ 1-2 ತಿಂಗಳಿಗಿಂತ ಮೊದಲು ಈ ಮೊದಲು ಇದ್ದ ಬಸ್ ನಿಲ್ದಾಣದಿಂದ ಬಸ್ ಇಳಿದು ರಸ್ತೆ ದಾಟುವ ಸಮಯದಲ್ಲಿ 8-10 ಜನರಿಗೆ ರಸ್ತೆ ಅಪಘಾತ ಉಂಟಾಗಿದ್ದು ಎಂದರೆ ಸರಿಯಲ್ಲ. ಈಗ ಇರುವ ಬಸ್ ನಿಲ್ದಾಣ ಪಾದಚಾರಿಗಳು ಓಡಾಡಲು ಇರುವ ರಸ್ತೆಯ ಹತ್ತಿರದಲ್ಲಿಯೇ ಇದೆ ಎಂದರೆ ಸರಿಯಲ್ಲ. ಜಾಗವನ್ನು ಪರಿಶೀಲನೆ ಮಾಡಲು traffic ACP ರವರು ಬಂದ ವಿಚಾರ ನನಗೆ ಗೊತ್ತಿರುತ್ತದೆ. ಗೋವಿಂದ ದಾಸ್ ಕಾಲೇಜ್ ನ ಎದುರುಗಡೆ ಇರುವ ಕ್ರಾಸ್ ಸೆಕ್ಷನ್ ನಿಂದ ಸುಮಾರು 50 ಮೀಟರ್ ದೂರ ಉತ್ತರಕ್ಕೆ ನನ್ನ ಆಸ್ತಿ ಇರುತ್ತದೆ. ಗೋವಿಂದ ದಾಸ್ ಕಾಲೇಜ್ ನಲ್ಲಿ ತುಂಬಾ ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ.

**ಈ ಹಂತದಲ್ಲಿ 3ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

5ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಮಂಗಳೂರು. {ಸಿ/ಸಿ}